**ದಿನಾಂಕಃ 20.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ವಾದಿ ಪರ ಶ್ರೀ.ಜಿ.ವಿ.ಕೆ. ವಕೀಲರಿಂದಃ**

1) ಸರ್ವೆ ನಂ.50/ಪಿ29 ಇದರ 2011-12 ನೇ ಸಾಲಿನ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ.12 ಎಂದು ಗುರುತಿಸಲಾಯಿತು.

2) ಸರ್ವೆ ನಂ.100/4 ಇದರ 2025-26 ನೇ ಸಾಲಿನ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ.13 ಎಂದು ಗುರುತಿಸಲಾಯಿತು.

3) ಸರ್ವೆ ನಂ.144/2 ಇದರ 2025-26 ನೇ ಸಾಲಿನ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ.14 ಎಂದು ಗುರುತಿಸಲಾಯಿತು.

4) ಸರ್ವೆ ನಂ.144/3 ಇದರ 2025-26 ನೇ ಸಾಲಿನ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ.15 ಎಂದು ಗುರುತಿಸಲಾಯಿತು.

5) ಎಂ.ಕೆ. ದೊಡ್ಡಿ ಪೊಲೀಸ್ ಠಾಣೆಯ ಠಾಣಾಧಿಕಾರಿಗಳು ನೀಡಿರುವ ಸ್ವೀಕೃತಿ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ.16 ಎಂದು ಗುರುತಿಸಲಾಯಿತು.

**ಮರು ವಿಚಾರಣೆಃ- ಇಲ್ಲ.**

**ಪಾಟೀ ಸವಾಲುಃ- ಪ್ರತಿವಾದಿಗಳ ಪರ ಶ್ರೀ.ಕೆ.ಪಿ.ಎಂ. ವಕೀಲರಿಂದ ಃ -**

1) ನಿಪಿ.11 ರ ಸಾಲದ ಬಾಂಡನ್ನು 2016-17 ರಲ್ಲಿ ಮಾಡಿಕೊಂಡಿರುತ್ತೇನೆ. ಸದರಿ ದಾಖಲೆಗೆ ನಾನು ಸಹಿ ಮಾಡಿರುತ್ತೇನೆ. ನಿಪಿ.11 ರ ದಾಖಲೆಯನ್ನು ಬ್ಯಾಂಕಿನ ಜೊತೆ ಮಾಡಿಕೊಳ್ಳುವ ಕಾಲಕ್ಕೆ ಅವರಿಗೆ ಈ ಪ್ರಸ್ತುತ ಪ್ರಕರಣ ಬಾಕಿ ಇರುವ ಬಗ್ಗೆ ಮಾಹಿತಿ ನೀಡಿದ್ದೆನು. ನಿಪಿ.11 ರಂತೆ ದಾಖಲೆಯನ್ನು ಮಾಡುವ ಪೂರ್ವದಲ್ಲಿ ಬ್ಯಾಂಕಿನವರು ನನ್ನ ಬಳಿ ಯಾವುದೇ ಕಾನೂನು ತಜ್ಞರಿಂದ ಪರಿಶೀಲನಾ ವರದಿಯನ್ನು ಪಡೆದಿರುವುದಿಲ್ಲ. 2015-16 ರ ಪಹಣಿ ಪತ್ರಿಕೆಗಳನ್ನು ನಾನು ಆ ವೇಳೆಗೆ ಬ್ಯಾಂಕಿಗೆ ನೀಡಿದ್ದನು.

ಬ್ಯಾಂಕಿನವರು ಖುದ್ದು ಸ್ಥಳಕ್ಕೆ ಬಂದು ಯಾರು ಸ್ವಾಧೀನದಲ್ಲಿ ಇರುತ್ತಾರೆ ಎಂದು ಪರಿಶೀಲನೆ ಮಾಡಿ ನಂತರ ನಿಪಿ.11 ರ ದಾಖಲೆಯನ್ನು ಮಾಡಿದ್ದರು.

2) ಆ ರೀತಿ ಸ್ಥಳದಲ್ಲಿ ಬ್ಯಾಂಕಿನವರು ಬಂದು ಪರಿಶೀಲನೆ ಮಾಡಿದ ಸಂಬಂಧ ದಾಖಲೆಗಳನ್ನು ನಾನು ಹಾಜರುಪಡಿಸಿರುವುದಿಲ್ಲ. ಕಾರಣ ಆ ಬಗ್ಗೆ ಬ್ಯಾಂಕಿನವರು ಯಾವುದೇ ಬರವಣಿಗೆ ಮಾಡಿಲ್ಲ. ನಾನು ಹೇಳಿದಂತೆ ಬ್ಯಾಂಕಿನವರು ಸ್ಥಳಕ್ಕೆ ಬಂದಿಲ್ಲ ಆದರೂ ಸಹ ಬ್ಯಾಂಕಿನವರ ಜೊತೆ ಶಾಮೀಲಾಗಿ ನಿಪಿ.11 ರ ದಾಖಲೆಯನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ.

3) ನಿಡಿ.12 ರಿಂದ 15 ರವರೆಗಿನ ಪಹಣಿ ಪತ್ರಿಕೆಗಳಿಗೂ ಮತ್ತು ದಾವಾ ಸ್ವತ್ತಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿ. ಖಾನೇಷುಮಾರಿ ನಂ.22 ರ ಸ್ವತ್ತು ಯಾರಿಗೆ ಸೇರಿದೆ ಎಂದು ನನಗೆ ಗೊತ್ತಿಲ್ಲ. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಮೂಲ ದಾಖಲೆಗಳನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿರುತ್ತೇನೆ. ದಾವಾ ಸ್ವತ್ತು ಮೂಲತಃ ದೇವಿರಮ್ಮ ತಿಬ್ಬೇಗೌಡರಿಗೆ ಸೇರಿತ್ತು. ದೇವಿರಮ್ಮನಿಗೆ ಆಕೆಯ ಗಂಡ ಕೆಂಪೇಗೌಡರವರು ಕ್ರಯ ಪತ್ರವನ್ನು ಬರೆದುಕೊಟ್ಟಿದ್ದರು. ಸದರಿ ಕ್ರಯ ಪತ್ರವನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿರುವುದಿಲ್ಲ. ಸದರಿ ಕ್ರಯ ಪತ್ರ ನನ್ನ ಬಳಿ ಇರುತ್ತದೆ. ಕೆಂಪೇಗೌಡರು ಶಿವರಾಜು ಎಂಬುವವರನ್ನು ದತ್ತಕ ಪಡೆದುಕೊಂಡಿದ್ದರು ಎಂದರೆ ಸರಿಯಲ್ಲ. ಆ ರೀತಿ ಶಿವರಾಜ್ ರವರನ್ನು ದತ್ತು ಪಡೆದ ನಂತರ ಸದರಿ ಶಿವರಾಜುರವರು ದಾವಾ ಸ್ವತ್ತನ್ನು ಉಳುಮೆ ಮಾಡಿಕೊಂಡು ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ನನ್ನ ಸ್ವತ್ತಿನ ಸ್ವಾಧೀನಕ್ಕೆ ಪ್ರತಿವಾದಿಗಳು ತೊಂದರೆ ನೀಡುತ್ತಿರುವ ಕಾರಣ ಈ ದಾವೆಯನ್ನು ಹೂಡಿರುತ್ತೇನೆ. ಈ ದಾವೆ ಹೂಡುವ ಮೊದಲಿನಿಂದಲೂ ಪ್ರತಿವಾದಿಗಳು ದಾವಾ ಸ್ವತ್ತಿನಲ್ಲಿ ಉಳುಮೆ ಮಾಡಿಕೊಂಡು ಅನುಭೋಗಿಸುತ್ತಾ ಬರುತ್ತಿದ್ದಾರೆ ಎಂದರೆ ಸರಿಯಲ್ಲ. ನಾನು ಸತ್ಯ ಸಂಗತಿಗಳನ್ನು ಮರೆಮಾಚಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು).

ಓ. ಹೆ. ಕೇ. ಸರಿ ಇದೆ.

**ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ**
**ನ್ಯಾಯಾಲಯ, ಚನ್ನಪಟ್ಟಣ.**